UNAUTHORISED CULTIVATION OF GOVERNMENT LAND IN TIPTUR

858. Sri T. M. MANJUNATH (Tiptur).—

Will the Minister for Revenue be pleased to state.—

(*a*) the number of applications received by the Tahsildar, Tiptur, in connection with unauthorised cultivation of Government land ;

(*b*) the action taken by him on those applications ;

(*c*) the time within which decision on those applications would be taken ?

Sri N. HUTCHAMASTY GOWDA (Minister for Revenue).—

(*a*) 949.

(*b*) Already 300 applications have been disposed of and remaining 649 applications are under enquiry and at different stages.

(*c*) As early as possible.

ಶ್ರೀ ಟಿ. ಎಂ. ಮಂಜುನಾಥ್: – ಸ್ವಾಮಿ, ಈ ಪ್ರಶ್ನೆ ಕೇಳತಕ್ಕ ಮೂಲ ಉದ್ದೇಶ ಇಷ್ಟೇ. ಸಾಮಾನ್ಯವಾಗಿ ಈಗಾಗಲೇ ರೈತರು ನಮ್ಮ ತಾಲ್ಲೂಕಿನಲ್ಲಿ 15–20 ವರ್ಷಗಳಿಂದ ಭೂಹೀನವರು ಸರ್ಕಾರಿ ಜಮೀನಿನಲ್ಲಿ ತೆಂಗಿನ ಗಿಡಗಳನ್ನು ಹಾಕಿ ಬೆಳೆಸಿದ್ದಾರೆ. ಅವು ಈಗಾಗಲೇ ಫಸಲು ಕೊಡುತ್ತಿವೆ. 15 ವರ್ಷಗಳಾದರೂ ಸಹ ಈ ವ್ಯವಹಾರ ನಡೆಯುತ್ತಾ ಇದೆ. ಡೇಟ್ ರಿಸರ್ವ್, ಎಕ್ಸ್‌ಟೆಜ್ ರಿಸರ್ವ್ ಎಂದು ಇಟ್ಟಿದ್ದೀರಿ. ಅದರಲ್ಲಿ ಈಚಲಮರವಿಲ್ಲ, ಅಧಿಕಾರಿಗಳು ಅನಾವಶ್ಯಕವಾಗಿ ತೊಂದರೆ ಕೊಡುತ್ತಿದ್ದಾರೆ. ಎಷ್ಟು ದಿವಸದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಅದು ಆಯಾಯ ಸಂದರ್ಭಗಳಿಗನುಗುಣವಾಗಿ ಆಗಬೇಕಾಗುತ್ತದೆ. ಮಾನ್ಯ ಸದಸ್ಯರು ಈಗತಾನೆ ಅಪ್ಪಣೆ ಕೊಡಿಸಿದಂತೆ ಡೇಟ್ ರಿಸರ್ವ್ ಆಕ್ರಮ ಸ್ವಾಧೀನ ಮಾಡಿಕೊಂಡಿದ್ದಾರೆ. ಇದನ್ನು ಕೂಡಲೇ ಮಂಜೂರು ಮಾಡುವುದಕ್ಕೆ ಆಗುವುದಿಲ್ಲ, ಫಾರೆಸ್ಟ್ ಲ್ಯಾಂಡಿನಲ್ಲಿ ಮಾಡಿದ್ದರೂ ಮಂಜೂರು ಮಾಡುವುದಕ್ಕೆ ಆಗುವುದಿಲ್ಲ. ಕೆರೆಯ ಅಂಗಳದಲ್ಲಿ ಮಾಡಿದ್ದರೆ ಮಂಜೂರು ಮಾಡುವುದಕ್ಕೆ ಆಗುವುದಿಲ್ಲ. ತಾಲ್ಲೂಕಿನಿಂದ ಹೊರಗಡೆ ಇರತಕ್ಕವರು ಇದ್ದರೆ ಅದನ್ನು ಕ್ರಮಪಡಿಸುವುದಕ್ಕೆ ಆಗುವುದಿಲ್ಲ. ಇಂಥ ಕೆಲವು ನಿಯಮಗಳಿವೆ. ನಿಯಮಗಳನ್ನು ನೋಡಿ ಅದರಂತೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕಡೆಯದಾಗಿ 1972 ನೇ ಇಸ್ವಿ ಡಿಸಂಬರ್ 31ನೇ ತಾರೀಖಿನವರೆಗೂ ಆಕ್ರಮ ಸ್ವಾಧೀನ ಮಾಡಿಕೊಂಡಿರುವುದಕ್ಕೆ ಅರ್ಜಿ ಹಾಕಲು ಅವಕಾಶ ಕೊಟ್ಟಿದೆ. 949 ಅಪ್ಲಿಕೇಷನ್‌ಗಳು ಬಂದಿವೆ. ಅವುಗಳ ಪೈಕಿ ಬಹಳ ಸುಲಭದಲ್ಲಿ ತೀರ್ಮಾನ ಮಾಡತಕ್ಕಂಥವುಗಳನ್ನು ತೀರ್ಮಾನ ಮಾಡಿದೆ. ಉಳಿದವುಗಳನ್ನು ಕೆಲವಾರು ದಿವಸದಲ್ಲಿ ಮಾಡುತ್ತೇವೆ. ಇಷ್ಟೇ ದಿವಸಗಳು ಎಂದು ನಿರ್ದಿಷ್ಟವಾಗಿ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ್ :—ನಾನು ಕೇಳಿರುವುದು ತಮ್ಮ ಕಾನೂನಿನ ಮಿತಿಯಲ್ಲಿ ಇರತಕ್ಕದ್ದು. ಗೋಮಾಳದಲ್ಲಾಗಲೀ, ಕೆರೆ ಅಂಗಳದಲ್ಲಾಗಲೀ ಅಂಥ ಕಡೆಯಲ್ಲಿಲ್ಲ. ತೆಂಗಿನ ಗಿಡ ಬೆಳೆಸಿ ಫಸಲು ಬರುತ್ತಿದೆ. 15-20 ವರ್ಷಗಳು ಆಗಿದೆ. ಕಾನೂನು ಪ್ರಕಾರ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೀರಿ. ಅಲ್ಲಿರುವ ಮರಗಳನ್ನು ಕಡಿಸುತ್ತೀರೋ, ಇಲ್ಲ ಅವರಿಗೇ ಕೊಡುತ್ತೀರೋ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಜಮೀನು ಕನ್‌ಫರ್ಮ್ ಮಾಡಿ ಕೊಡುವುದಕ್ಕೆ ಸಾಧ್ಯವಿಲ್ಲ. ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಂಡು ಜಮೀನು ಇಲ್ಲದವರಿಗೆ ಹಂಚುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ್ :—ಜಮೀನುಗಳು ಇರತಕ್ಕವರಿಗೆ, ಜಮೀನು ಹೊಂದಿರ ತಕ್ಕವರಿಗೆ ಏನು ಆಶ್ವಾಸನೆ ಕೊಡುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ರೂಲ್ಸ್ ಪ್ರಕಾರ ಕೊಡುವುದಕ್ಕೆ ಸಾಧ್ಯವಿದ್ದರೆ ಕೊಡುತ್ತೇವೆ, ಇಲ್ಲದಿದ್ದರೆ ಸರ್ಕಾರ ಅವುಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

DISTRIBUTION OF CULTIVABLE LANDS IN TIPTUR TALUK

859. Sri T. M. MANJUNATH (Tiptur).—

Will the Minister for Revenue be pleased to state:—

(*a*) the number of acres of cultivable land available for distribution in Tiptur Taluk ;

(*b*) the action taken to distribute such lands to the landless people in this Taluk ;

(c) the procedure followed for distribute of such land ?

Sri N. HUTCHAMASTHY GOWDA (Minister for Revenue).—A.—G.

(*a*) 1625-19 as on 31st March 1973.

(*b*) Necessary records have been built up for grant of land to the extent of 332 acres in consultation with the Taluk Consultative committee.

As regards the remaining extent of 1,293 acres 19 guntas the applications received are being processed by the special staff.

(*c*) The Procedure contemplated in the Mysore Land Grant Rules, 1969 is being followed.

ಶ್ರೀ ಟಿ. ಎಂ. ಮಂಜುನಾಥ್ :—ನಮ್ಮ ತಾಲ್ಲೂಕಿನಲ್ಲಿರತಕ್ಕ ಜಮೀನು 1.600 ಎಕರೆ ಎಂದು ಹೇಳಿದ್ದೀರಿ. 1.600 ಎಕರೆಗೆ ಬಂದಿರತಕ್ಕ ದರಖಾಸ್ತು ಅಪ್ಲಿಕೇಷನ್ಸ್ ನೋಡಿದಾಗ ಬಹುಶಃ 4 ಲಕ್ಷ ಅಪ್ಲಿಕೇಷನ್‌ಗಳು ಬಂದಿವೆ. ಯಾವ ಕ್ರಮಗಳಿಗನುಗುಣವಾಗಿ ಇಷ್ಟು ಅರ್ಜಿಗಳಿಗೆ ಭೂಮಿಯನ್ನು ಹಂಚುತ್ತೀರಿ ? ಅದರ ಜೊತೆಗೆ ಅಲ್ಲಿ ಹೊಸದಾಗಿ ಸೃಷ್ಟಿ